
# ದೇಗುಲ ನಿರ್ಮಾಣದ ಲೆಕ್ಕಪರಿಶೋಧನೆ

ಕಥೆ: ಯು.ವಿ. ಸ್ವಾಮಿನಾಥ ಅಯ್ಯರ್    ಚಿತ್ರ: ವಿ. ಆರ್ಮುಗಂ    ನಿರೂಪಣೆ: ರೇವತಿ






3 ಮಂತ್ರಿಯ ಮೇಲ್ವಿಚಾರಣೆಯಲ್ಲಿ ದೇವಾಲಯದ ನಿರ್ಮಾಣ ಕಾರ್ಯ ಆರಂಭವಾಯಿತು. ಶಿಲ್ಪಿಗಳು ತಮ್ಮ ಕಲೆಯ ಕೌಶಲ್ಯವನ್ನು ಪ್ರದರ್ಶಿಸಲು ಸೆಣಸಾಡಿದರು.



**4** ಕೆಲವು ತಿಂಗಳ ನಂತರ ಮಂತ್ರಿ ರಾಜನ ಆಸ್ಥಾನಕ್ಕೆ ಬಂದ.




**5** ಒಂದು ದಿನ ರಾಜನು ಅರಮನೆಯ ಮೇಲ್ಛಾವಣಿಯಲ್ಲಿ ನಡೆದಾಡುತ್ತಿದ್ದ. ಆಗ ಕೆಳಗೆ ಉದ್ಯಾನದಲ್ಲಿ...




**6**




ಮರುದಿನ ದೇವಾಲಯದ ನಿರ್ಮಾಣ ಕಾರ್ಯ ನಡೆಯುತ್ತಿದ್ದಲ್ಲಿಗೆ ಮಹಾರಾಜ ಬಂದ.






**8** ರಾಜನ ಮಾತನ್ನು ಕೇಳಿ ಮಂತ್ರಿ ಚಿಂತಿತನಾದ. ಖರ್ಚು ವೆಚ್ಚದ ವಿವರವಾದ ಲೆಕ್ಕಾಚಾರವನ್ನು ಇಟ್ಟಿರಲಿಲ್ಲ. ದೇವರಿಗಾಗಿ ಮತ್ತು ತನ್ನ ಪ್ರೀತಿಯ ರಾಜನಿಗಾಗಿ ಪ್ರಾಮಾಣಿಕ ಕರ್ತವ್ಯ ನಿರ್ವಹಿಸುತ್ತಿದ್ದ ಮಂತ್ರಿಗೆ ಅವರ ಮೇಲೆ ಅಪಾರ ನಂಬಿಕೆ ಇತ್ತು . ರಾಜನು ಲೆಕ್ಕಾಚಾರ ಕೇಳುತ್ತಾನೆಂದು ಮಂತ್ರಿಯು ಕನಸಿನಲ್ಲಿಯೂ ಯೋಚಿಸಿರಲಿಲ್ಲ. ಮರುದಿನ ಮಂತ್ರಿ ದೇವಾಲಯ ನಿರ್ಮಾಣವಾಗುತ್ತಿದ್ದ ಸ್ಥಳದಲ್ಲಿ ವಿಘ್ನೇಶ್ವರನ ಪ್ರತಿಮೆಯ ಮುಂದೆ ನಿಂತು..




**10** ಮರುದಿನ ರಾಜನ ಆಸ್ಥಾನಕ್ಕೆ ಖರ್ಚುವೆಚ್ಚದ ಲೆಕ್ಕಾಚಾರಗಳೊಂದಿಗೆ ಒಬ್ಬ ಬ್ರಹ್ಮಚಾರಿ ಬಂದ.




11
ಓ! ಜನರ ಮಾತನ್ನು ಕೇಳಿ ನಾನು ಮಂತ್ರಿಯ ಕರ್ತವ್ಯನಿಷ್ಠೆಯನ್ನೇ ಸಂದೇಹಪಟ್ಟೆ.
ಮಹಾರಾಜ, ಯಾವುದಾದರೊಂದು ದಿನವನ್ನು ಹೆಸರಿಸು. ಅಂದಿನ ಖರ್ಚಿನ ವಿವರಗಳನ್ನು ನಾನು ಕೊಡುತ್ತೇನೆ. ಸ್ವತಃ ನೀನೇ ಅದನ್ನು ಪರಿಶೀಲಿಸಬಹುದು.
12
ನ್ಯಾಯಾಧೀಶರುಗಳೇ! ಇದೀಗ ಪರೀಕ್ಷೆ ನನಗೆ. ಹಾಗಾಗಿ ಯಾವ ದಿನದ ಖರ್ಚುವೆಚ್ಚದ ಲೆಕ್ಕಾಚಾರಗಳನ್ನು ಓದಬೇಕೋ ನೀವೇ ನಿರ್ಧರಿಸಿ.
ಲೆಕ್ಕಪರಿಶೋಧಕರೆ, ಮೊದಲ ದಿನದ ವಿವರಗಳನ್ನು ಓದಿ ಹೇಳಿರಿ!
ಮಹಾರಾಜ! ಮಂತ್ರಿಯ ತಪ್ಪು ಯಾವುದೂ ಇಲ್ಲ. ಆದ್ದರಿಂದ ಅವನಲ್ಲಿ ಲೆಕ್ಕಚಾರ ಕೇಳುವುದು ಸರಿಯಲ್ಲ. ಆದ್ದರಿಂದ ತಾವೇ ನಿರ್ಧಾರ ತೆಗೆದುಕೊಳ್ಳಬೇಕು.
13
ಸೆಣಬಿನ ದಾರಕ್ಕೆ ಎಂಟು ಸಾವಿರ.
ಮಹಾರಾಜ! ಯಾವುದೇ ಕಟ್ಟಡ ನಿರ್ಮಾಣಕ್ಕೆ ಮೊದಲನೆಯ ಖರ್ಚು ಸೆಣಬಿನ ದಾರದ ಖರೀದಿಗಾಗಿ. ಆ ದಾರದಿಂದ ಅಳತೆ ಮಾಡಿಯೇ ಮುಂದಿನ ನಿರ್ಮಾಣ ಕಾರ್ಯದ ಖರ್ಚನ್ನು ಲೆಕ್ಕ ಮಾಡುತ್ತಾರೆ. ಇದಕ್ಕಾಗಿ ಮಂತ್ರಿಯ ಕರ್ತವ್ಯ ನಿಷ್ಠೆಯನ್ನು ಪ್ರಶ್ನಿಸಬಹುದೆ?
ಲೆಕ್ಕಪರಿಶೋಧಕರೆ, ಸರಿಯಾಗಿದೆ. ಇನ್ನು ನೀವು ದಾಖಲಾತಿಗಳನ್ನು ತೆಗೆದುಕೊಂಡು ಹೋಗಿ. ಜನರ ನಿಂದೆಯ ಮಾತುಗಳನ್ನು ತಪ್ಪಿಸಲು ನಾನು ಹೀಗೆ ಮಾಡಬೇಕಾಯಿತು ಎಂದು ಮಂತ್ರಿಗೆ ತಿಳಿಸಿ. ಅವನ ಬಗ್ಗೆ ನನಗೆ ತಿಳಿದಿರುವುದನ್ನು ಇಡೀ ಆಸ್ಥಾನ ತಿಳಿಯಬೇಕೆಂಬುದೇ ನನ್ನ ಬಯಕೆ.
ರಾಜನ ವಿವೇಚನೆಯನ್ನು ಕಂಡು ಎಲ್ಲರೂ ತಲೆದೂಗಿದರು.
14
ಲೆಕ್ಕಪರಿಶೋಧಕನು ಹೋಗಿ, ಸ್ವಲ್ಪ ಹೊತ್ತಿನ ಬಳಿಕ ಮಂತ್ರಿಯೊಂದಿಗೆ ಮತ್ತೆ ಬಂದ.
ಬಾ ಮಂತ್ರಿ, ಬಾ! ದೀರ್ಘಾಯುವಾಗು. ನಿನ್ನ ಲೆಕ್ಕಪರಿಶೋಧಕ ಮಾಡಿದ ಪರಿಶೀಲನೆಯಲ್ಲಿ ನಿನ್ನ ಕರ್ತವ್ಯ ನಿಷ್ಠೆಯನ್ನು ನಾನು ಕಂಡೆ.
ಏನು? ನನ್ನ ಲೆಕ್ಕಪರಿಶೋಧಕ ಇಲ್ಲಿಗೆ ಬಂದನೆ? ಅವನು ನನ್ನ ಬಳಿಯಲ್ಲೇ ಯಾವಾಗಲೂ ಇದ್ದನಲ್ಲ.
15
ನಡೆದ ಕಾರ್ಯಗಳನ್ನೆಲ್ಲ ರಾಜನು ತನ್ನ ಆಸ್ಥಾನದಲ್ಲಿ ವಿವರಿಸಿದ. ಮಂತ್ರಿ ಕೂಡ ತಾನು ವಿಘ್ನೇಶ್ವರನನ್ನು ಪ್ರಾರ್ಥಿಸಿದ ವಿಚಾರವನ್ನು ಸಭೆಗೆ ತಿಳಿಸಿದ.
ಅಂದರೆ, ಲೆಕ್ಕಪರಿಶೋಧಕನಾಗಿ ನಿಜವಾಗಿಯೂ ಬಂದವನು ದ್ವಾರಪಾಲಕನಾದ ವಿಘ್ನೇಶ್ವರನೇ ಇರಬೇಕಲ್ಲವೆ!
ಹೌದು ಮಹಾರಾಜ, ವಿಘ್ನೇಶ್ವರನು ಕೃಪೆ ತೋರಿ ಭಕ್ತನ ಕರ್ತವ್ಯ ನಿಷ್ಠೆಯನ್ನು ಪ್ರಮಾಣೀಕರಿಸಲು ಬಂದು, 'ಎಂಟು ಸಾವಿರ ಸೆಣಬಿನ ದಾರಕ್ಕಾಗಿ' ಎಂದ. ಅವನ ಕೃಪೆಗೆ ಎಣೆಯೇ ಇಲ್ಲ.
16
ಕಲಿಯುಗದಲ್ಲಿ ಸತ್ಯವಚನವೇ ತಪಸ್ಸು. ಸತ್ಯವನ್ನೇ ನುಡಿಯುವವರಿಗೆ ದೇವರೇ ದಾರಿ ತೋರಿಸುತ್ತಾನೆ.
– ಶ್ರೀರಾಮಕೃಷ್ಣರು